

ಡಕ್ಸ್



ಗ್ರೇ ಹೆರಾನ್ಸ್


ಮೆಳೆಕೋಟೆ ಕೆರೆಯಲ್ಲೀಗ ಬಾನಾಡಿಗಳ ಚಿಲಿಪಿಲಿ. ತುಮಕೂರು ನಗರದಿಂದ ಮೆಳೆಕೋಟೆ ಕೆರೆಗೆ ಕೇವಲ 5 ಕಿ.ಮೀ. ಅಂತರ. ಒಂದು ಕಾಲದಲ್ಲಿ ಈ ಕೆರೆ ಗ್ರಾಮಕ್ಕೆ ಕುಡಿಯುವ ನೀರೊದಗಿಸುವ ಜಲಮೂಲವಾಗಿತ್ತು, ತೋಟಗಳಿಗೆ ನೀರುಣಿಸುವ ಗಂಗಾಮಾತೆಯಾಗಿತ್ತು. ವರ್ಷಧಾರೆಯಿಂದ ಕೆರೆಯ ಒಡಲು ತುಂಬಿದಾಗ ಜನಪದರು ಬಾಗಿನ ಅರ್ಪಿಸಿ ಸಂಭ್ರಮಿಸುತ್ತಿದ್ದರು. ಇಂದು ಆ ಸಂಭ್ರಮವೆಲ್ಲ ಒಂದಾನೊಂದು ಕಾಲದ ಸವಿನೆನಪಾಗಿಯಷ್ಟೇ ಉಳಿದಿದೆ. ಆಧುನಿಕತೆಯ ಪ್ರತಿಫಲದ ರೂಪದಲ್ಲಿ ಕನ್ನಡಿಯಂತಿದ್ದ ಕೆರೆ ಕಲ್ಮಶಗಳ ಆಗರವಾಗಿದೆ.

ಕೆರೆಯ ನೀರು ಕಲುಷಿತವಾದರೂ ಬಾನಾಡಿಗಳ ಮಟ್ಟಿಗೆ ಮಾತ್ರ ಮೆಳೆಕೋಟೆಯ ಕೆರೆ ಇನ್ನೂ ಆಕರ್ಷಣೆ ಉಳಿಸಿಕೊಂಡಿದೆ. ಪ್ರತಿ ವರ್ಷವೂ ಚಳಿಯ ದಿನಗಳಲ್ಲಿ ಸಾಲು ಸಾಲು ಪಕ್ಷಿಗಳು ಕೆರೆಯ ಪರಿಸರದಲ್ಲಿ ನೆಲೆಸುತ್ತವೆ. ಅಷ್ಟೇನೂ ಚಳಿಯಿಲ್ಲದ ಇಲ್ಲಿನ ಪರಿಸರ ಬಾನಾಡಿಗಳಿಗೆ ಹಿತವಾಗಿ ಕಂಡಿರಬೇಕು.

ಸೂರ್ಯೋದಯದೊಂದಿಗೇ ಮೆಳೆಕೋಟೆ ಕೆರೆಯ ಪರಿಸರದಲ್ಲಿ ಹಕ್ಕಿಗಳ ಚಿಲಿಪಿಲಿ ಮೇಳವೂ ಮೊರೆಯತೊಡಗುತ್ತದೆ. ಒಂದೆಡೆ ಮೂಡುವ ರವಿ ಬಿಡಿಸುವ ಹೊಂಬಣ್ಣದ ಸೊಬಗು, ಇನ್ನೊಂದೆಡೆ ಗಿಡಗಂಟೆಗಳ ಕೊರಳೊಳಗಿಂದ ಹೊರಡುವ ಹಕ್ಕಿಗಳ ಗೀತೆ – ಕೆರೆಯೆನ್ನುವುದೊಂದು ಕಿನ್ನರಲೋಕವಾಗಿ ಬದಲಾಗುವ ಕ್ಷಣಗಳವು.

ಬಾನಾಡಿಗಳ ಸಂಭ್ರಮವನ್ನು ನೋಡಲು ಕೆರೆಯಂಗಳದಲ್ಲಿ ಕೆಲವು ಸೌಂದರ್ಯೋಪಾಸಕರು ಸೇರುವುದಿದೆ. ಫೋಟೊಗ್ರಾಫರ್‌ಗಳ ಪಾಲಿಗಂತೂ ಹಕ್ಕಿಗಳು ಹಬ್ಬದ ಸಡಗರದಂತೆ ಕಾಣಿಸುತ್ತವೆ. ರಜಾದಿನಗಳಲ್ಲಿ ಪಕ್ಷಿಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ.

ಪೆಡ್ಡಿ ಬರ್ಡ್, ಕ್ಯಾಟಲ್ ಈಗ್ರೇಟ್, ಗ್ರೇ ಹೆರಾನ್, ಪೆಡ್ಡಿಫೀಲ್ಡ್ ಪಿಪಿಟ್, ಬಾರ್ನ್‌ಸ್ವಾಲೋ, ಲಾರ್ಜ್ ಕಾರ್ಮೋರಂಟ್, ಪೇಂಟೆಡ್ ಸ್ಟಾರ್ಕ್ ಸ್ಪಾಟ್ ಬಿಲ್ಲಡ್ ಡಕ್, ಬ್ರಾಹ್ಮಿನಿ ಕೈಟ್, ಕಿಂಗ್‌ಫಿಶರ್ – ಹೀಗೆ ಹಲವಾರು ಬಾನಾಡಿಗಳಿಗೆ ಆಸರೆಯಾಗಿರುವ ಕೆರೆಯನ್ನು ‘ಪಕ್ಷಿಧಾಮ’ ಎಂದು ಘೋಷಿಸುವಂತೆ ಪರಿಸರಪ್ರಿಯರು ಒತ್ತಾಯಿಸುತ್ತಿದ್ದಾರೆ. ನೆರೆಯ ಭೂತಾನ್, ಯುರೋಪಿನ ದೇಶಗಳ ಕೆಲವು ಪಕ್ಷಿಗಳೂ ಮೆಳೆಕೋಟೆಗೆ ಬರುವುದಿದೆ. ತುಮಕೂರಿನ ‘ನಿಸರ್ಗ’ ಸಂಸ್ಥೆಯವರು ಪಕ್ಷಿಪ್ರಿಯರಿಗೆ ಪಕ್ಷಿವೀಕ್ಷಣೆ ಕಾರ್ಯಕ್ರಮವನ್ನು ಪ್ರತಿ ವರ್ಷ ಆಯೋಜಿಸುತ್ತಾರೆ.



ಗ್ರೇಹೆಡೆಡ್ ಸ್ವಾಂಫೆನ್

ತುಮಕೂರು ಸ್ಮಾರ್ಟ್ ಸಿಟಿ ಪ್ರಭಾವಳಿಯಲ್ಲಿ ಕಂಗೊಳಿಸುತ್ತಿರುವ ನಗರ. ಆದರೆ, ನಗರಕ್ಕೆ ಹೊಂದಿಕೊಂಡಂತಿರುವ ಮೆಳೆಕೋಟೆಯ ಕೆರೆಯದ್ದು ಕುರೂಪ. ಪಕ್ಷಿಗಳ ಕಾರಣದಿಂದಾದರೂ ಕೆರೆಗೆ ಹೊಸ ರೂಪ ಬಂದೀತೆ? ■